ಕ್ರಿಮಿನಲ್ ಮಿಸ್ ಕೇಸ್ ನಂಬ್ರ: 74/2019 ಪಿಡಬ್ಲ್ಯೂ-**1**

ದಿನಾಂಕ: 21-08-2024 ರಂದು ಸಾಕ್ಷಿಯನ್ನು ಪುನಹ ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

ಪಾಟಿ ಸವಾಲು: **1, 3 ಮತ್ತು 4 ನೇ** ಎದುರುದಾರರ ಪರ ವಕೀಲರಾದ ಶ್ರೀ ಯು. ಎಸ್.ಎಸ್. ರವರಿಂದ

ನಾನು ಕೆಲಸಕ್ಕೆ ಹೋಗುವುದಿಲ್ಲ, ಮನೆಯಲ್ಲಿ ಇರುತ್ತೇನೆ. ನನಗೆ 4 ಜನ ಮಕ್ಕಳು. ನನಗೆ 3 ಗಂಡು ಮಕ್ಕಳು, ಒಂದು ಹೆಣ್ಣು . ನನ್ನ ದೊಡ್ಡ ಮಗ ಮಾರಣಕಟ್ಟೆಯಲ್ಲಿ ವಾಸವಾಗಿದ್ದಾನೆ. 2 ನೇ ಮಗ ಬೆಂಗಳೂರಿನಲ್ಲಿ ವಾಸವಾಗಿದ್ದಾನೆ. 2 ನೇ ಮಗ ಸುಮಾರು 18 ವರ್ಷದಿಂದ ಬೆಂಗಳೂರಿನಲ್ಲಿ ವಾಸವಾಗಿದ್ದಾನೆ. ಈಗ ನನ್ನ 2 ನೇ ಮಗನಿಗೆ 33 ವರ್ಷ ಪ್ರಾಯ. 3 ನೇ ಮಗ ಎಲ್ಲಿ ವಾಸವಾಗಿದ್ದಾನೆ ಎಂದು ಗೊತ್ತಿಲ್ಲ. ನನ್ನ ಮಗಳು ಬೆಂಗಳೂರಿನಲ್ಲಿ ವಾಸವಾಗಿದ್ದಾಳೆ. ನನ್ನ ದೊಡ್ಡ ಮಗ 7 ನೇ ತರಗತಿಯವರೆಗೆ ಓದಿರುತ್ತಾನೆ. 3 ನೇ ಮಗ 10 ನೇ ತರಗತಿ ಓದಿರುತ್ತಾನೆ. ನನ್ನ ಮಗಳು 9 ನೇ ತರಗತಿಗೆ ವಿಧ್ಯಾಭ್ಯಾಸ ಮುಗಿಸಿರುತ್ತಾಳೆ. 1 ರಿಂದ 4 ನೇ ಎದುರುದಾರರು ಸರ್ಕಾರಿ ಶಾಲೆಯಲ್ಲಿ ಓದಿರುತ್ತಾರೆ.

1 ನೇ ಎದುರುದಾರರ ಏನು ಕೆಲಸ ಮಾಡುತ್ತಾನೆ ಎಂಬ ಬಗ್ಗೆ ದಾಖಲೆ ಇಲ್ಲ. ಅಂಗಡಿ ನನ್ನ ಹೆಸರಿನಲ್ಲಿ ಇತ್ತು ಎಂಬ ಬಗ್ಗೆ ದಾಖಲು ಹಾಜರುಪಡಿಸಿಲ್ಲ. ನನ್ನ ಹೆಸರಿನಲ್ಲಿರುವ ಅಂಗಡಿಯನ್ನು ನನ್ನ ಮಗ 1 ನೇ ಎದುರುದಾರರಿಗೆ ನೀಡಿರುವ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ. 3 ನೇ ಎದುರುದಾರ ಏನು ಕೆಲಸ ಮಾಡುತ್ತಾನೆ, ಎಷ್ಟು ಆದಾಯ ಎಂಬ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನನ್ನ ಮಗಳು ಮದುವೆಯಾಗಿ 12 ವರ್ಷ ಆಗಿರುತ್ತದೆ. ನನ್ನ ಮಗಳಿಗೆ ಈಗ 29 ವರ್ಷ. ನನ್ನ ಮಗಳು ಬೆಂಗಳೂರಿನಲ್ಲಿ ಬ್ಯೂಟಿಪಾರ್ಲರ್ ನಡೆಸುತ್ತಾಳೆ. ನನ್ನ ಮಗಳು ಬೆಂಗಳೂರಿನಲ್ಲಿ ಬ್ಯೂಟಿ ಪಾರ್ಲರ್ ನಡೆಸುತ್ತಿದ್ದಾಳೆ ಮತ್ತು ಅವಳಿಗೆ 35 ಸಾವಿರ ಆದಾಯ ಇದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ.

2 ನೇ ಮಗನಿಗೆ 2023 ರ ಅಕ್ಟೋಬರ್ ತಿಂಗಳಲ್ಲಿ ಮದುವೆ ಆಗಿರುತ್ತದೆ. ಮದುವೆ ಧರ್ಮಸ್ಥಳದಲ್ಲಿ ಆಗಿರುತ್ತದೆ, ನಾನು ಕೂಡ ಮದುವೆಗೆ ಹೋಗಿದ್ದೆ. ಮದುವೆ ಹೊರಟ್ಟಿದ್ದು ಮತ್ತು ಮದುವೆಯಿಂದ ಮದುಮಗ ವಾಪಾಸು ಬಂದಿದ್ದು ನಮ್ಮ ಮನೆಗೆ ಎಂದರೆ ಸರಿ. ನಮಗೆ ಪಿತ್ರಾರ್ಜಿತ ಆಸ್ತಿ 70 ಸೆಂಟ್ಸ್ ಇದ್ದು, ಇನ್ನು ಬಂದಿಲ್ಲ. ನನ್ನ ಹೆಸರಿನಲ್ಲಿ ದರ್ಕಾಸ್ತು ಮೂಲಕ 1 ಎಕರೆ ಜಾಗ ಬಂದಿದೆ. ಅದರ ಪಹಣಿ ನನ್ನ ಹೆಸರಿನಲ್ಲಿ ಇದೆ. ನನ್ನ

ತಾಯಿಯ ಕಡೆಯ ಆಸ್ತಿ ಪಾಲು ಆಗಿರುವುದಿಲ್ಲ. ಪಿತ್ರಾರ್ಜಿತ ಆಸ್ತಿನಲ್ಲಿ ನನ್ನ ತಂಗಿ ಸಾಗುವಳಿ ಮಾಡುತ್ತಾಳೆ. ನನ್ನ ಹೆಸರಿನಲ್ಲಿರುವ 1 ಎಕರೆ 85 ಸೆಂಟ್ಸ್ ನಲ್ಲಿ ತೆಂಗು ಮತ್ತು ಗೇರು ಗಿಡಗಳಿವೆ ಎಂದರೆ ಸರಿಯಲ್ಲ. ನಮ್ಮ ಪಿತ್ರಾರ್ಜಿತ ಆಸ್ತಿನಲ್ಲಿ ನನ್ನ ತಂಗಿ ಸಾಗುವಳಿ ಮಾಡಿ ವರ್ಷಕ್ಕೆ ಎರಡೂವರೆ ಲಕ್ಷ ಕೊಡುತ್ತಾರೆ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿರುವ ಆಸ್ತಿಯಲ್ಲಿ ನನಗೆ ವರ್ಷಕ್ಕೆ 2 ಲಕ್ಷ ಆದಾಯ ಬರುತ್ತದೆ ಎಂದರೆ ಸರಿಯಲ್ಲ.

ನನಗೆ ಬೇರೆ ಬೇರೆ ಖಾಯಿಲೆ ಇದೆ ಎಂದು ತೋರಿಸಲು ನ್ಯಾಯಲಯಕ್ಕೆ ಹಾಜರು ಪಡಿಸಿಲ್ಲ. ನನಗೆ ತಿಂಗಳಿಗೆ ವೈದ್ಯಕೀಯ ಖರ್ಚಿಗೆ 10 ಸಾವಿರ ಬೇಕಾಗುತ್ತದೆ, ಆ ಸಂಬಂಧ ದಾಖಲೆ ನ್ಯಾಯಲಯಕ್ಕೆ ಹಾಜರುಪಡಿಸಿಲ್ಲ. 1 ರಿಂದ 4 ನೇ ಎದುರುದಾರರಿಗೆ ಅರ್ಜಿಯಲ್ಲಿ ಹೇಳಿರುವಷ್ಟು ಆದಾಯ ಬರುತ್ತದೆ ಎಂದು ತೋರಿಸಲು ದಾಖಲೆ ಇರುವುದಿಲ್ಲ. ನಾನು ಒರಟು ಸ್ವಭಾವದವಳಾಗಿದ್ದು, ನನ್ನ ಮಕ್ಕಳನ್ನು ಮನೆಗೆ ಸೇರಿಸದೆ ದೂರ ಇಟ್ಟಿರುತ್ತೇನೆ ಎಂದರೆ ಸರಿಯಲ್ಲ. ಕಳೆದ 1 ತಿಂಗಳ ಹಿಂದೆ ನನ್ನ ಮಗಳು ನನಗೆ ಕರೆ ಮಾಡಿರುತ್ತಾಳೆ ಎಂದರೆ ಸರಿ. 3 ತಿಂಗಳ ಹಿಂದೆ ನನ್ನ ಮಗಳು ಹಣ ಕೊಟ್ಟಿರುತ್ತಾಳೆ ಎಂದರೆ ಸಾಕ್ಷಿಯು ರೂ.500/- ಕೊಟ್ಟಿರುತ್ತಾಳೆ ಎಂದು ನುಡಿದಿರುತ್ತಾರೆ.

**(ಎದುರುದಾರರು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ಪಾಟೀ ಸವಾಲಿಗಾಗಿ ಮುಂದೂಡಲಾಯಿತು )**

ಓದಿ ಹೇ. ಕೇ. ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ